ಬೈಲಹೊಂಗಲ ತಾಲ್ಲೂಕಿನ ಬೆಳವಡಿಯಲ್ಲಿ ಸರಕಾರಿ ಪದವಿ ಕಾಲೇಜು.

3045:(4131)

ಶ್ರೀ ಮಹಾಂತೇಶ್ ಎಸ್.ಕೌಜಲಗಿ, (ಬೈಲಹೊಂಗಲ) ಮಾನ್ಯ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸ್ವಾತಂತ್ರ್ಯ ಸಂಗ್ರಾಮದ ಊರಾದ ಹಾಗೂ ಸ್ವಾತಂತ್ರ್ಯ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ವರ್ಷದ ಸವಿನೆನಪಿಗಾಗಿ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿಯಲ್ಲಿ ಸರಕಾರಿ ಡಿಗ್ರಿ ಕಾಲೇಜನ್ನು ಪ್ರಾರಂಭಿಸಬೇಕೆಂದು ಮನವಿಗಳು ಬಂದಿವೆಯೇ?

2) ಹಾಗಿದ್ದಲ್ಲಿ, ಈ ಕಾಲೇಜು ಪ್ರಾರಂಭಿಸಲು ಸರಕಾರದವರು ಯಾವ ಕ್ರಮ ಕೈಗೊಂಡಿರುವರು?

3) ಮುಖ್ಯಮಂತ್ರಿಗಳು ಬೆಳವಡಿಗೆ ಬಂದಿದ್ದಾಗ ಸ್ವಾತಂತ್ರೊತ್ಸವ ಸವಿನಯ ವರ್ಷ ಆಚರಿಸುವ ನೆನಪಿಗೊಸ್ಕರ ಹಾಗೂ ಐತಿಹಾಸಿಕ ಬೆಳವಡಿ ಮಲ್ಲಮ್ಮನ ಗ್ರಾಮವಾದ ಬೆಳವಡಿಯಲ್ಲಿ ಸರಕಾರಿ ಡಿಗ್ರಿ ಕಾಲೇಜನ್ನು ಪ್ರಾರಂಭಿಸುವುದಾಗಿ ಸಾರ್ವಜನಿಕ ಸಭೆಯಲ್ಲಿ ಘೋಷಿಸಿದ್ದು, ಮುಖ್ಯಮಂತ್ರಿಗಳ ಘೋಷಣೆಯ ಪ್ರಕಾರ ಇಲ್ಲಿ ಕೂಡಲೇ ಕಾಲೇಜು ಪ್ರಾರಂಭಿಸಲು ಕ್ರಮ ಕೈಕೊಳ್ಳಲಾಗುವುದೇ?

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಉನ್ನತ ಶಿಕ್ಷಣ ಸಚಿವರು):

1) ಹೌದು.

2) ಸದ್ಯಕ್ಕಿಲ್ಲ.

3) ಇಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳು

3046:(4133)

ಶ್ರೀ ಮಹಾಂತೇಶ್ ಎಸ್.ಕೌಜಲಗಿ (ಬೈಲಹೊಂಗಲ) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ 1996-97, 1997-98 ಹಾಗೂ 1998-99ನೇ

ಸಾಲಿನಲ್ಲಿ ಎನ್‌ಆರ್‌ಡಬ್ಲ್ಯುಎಸ್ ಹಾಗೂ ಮಿನಿ ವಾಟರ್ ಸಪ್ಲೈ ಯೋಜನೆಯ ಎಷ್ಟು ಕುಡಿಯುವ ನೀರಿನ ಕೆಲಸಗಳು ಮುಗಿದಿರುವುವು? (ಕ್ಷೇತ್ರವಾರು ವಿವರ ನೀಡುವುದು)

ಆ) ಇವುಗಳಲ್ಲಿ ಎಷ್ಟು ಕೆಲಸಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಲಾಗಿದೆ?

ಇ) ಈ ಕೆಲಸಗಳು ಯಾವ ಹಂತದಲ್ಲಿವೆ?

ಈ) ಹಣಕಾಸಿನ ತೊಂದರೆಯಿಂದಾಗಿ ಕೆಲಸಗಳು ಮಂದ ಗತಿಯಿಂದ ನಡೆಯುತ್ತಿರುವುದು ನಿಜವೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ವಿವರಗಳನ್ನು ''ಅನುಬಂಧ-ಅ''ನಲ್ಲಿ ನೀಡಲಾಗಿದೆ.

ಆ) 1996-97, 97-98 ಮತ್ತು 98-99ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತಿಯಡಿ ಒಟ್ಟು 241 ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳಿಗೆ ಮತ್ತು 354 ಕಿರುನೀರು ಸರಬರಾಜು ಯೋಜನೆಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಇ) 241 ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳ ಪೈಕಿ 141 ಯೋಜನೆಗಳು ಪೂರ್ಣಗೊಂಡಿದ್ದು, 100 ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ. 354 ಕಿರುನೀರು ಸರಬರಾಜು ಯೋಜನೆಗಳ ಪೈಕಿ 222 ಯೋಜನೆಗಳು ಪೂರ್ಣಗೊಂಡಿದ್ದು, 132 ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ.

ಈ) ವಾರ್ಷಿಕ ಅನುದಾನಕ್ಕನುಗುಣವಾಗಿ ಯೋಜನೆಗಳನ್ನು ರೂಪಿಸಿ, 2 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸತಕ್ಕದೆಂದು ಜಿಲ್ಲಾಪಂಚಾಯತ್‌ಗಳಿಗೆ ಸರ್ಕಾರದಿಂದ ನಿರ್ದೇಶಿಸಲಾಗಿದೆ.

ಅನುಬಂಧ-ಅ

(ವಿಧಾನಸಭೆ ಪ್ರಶ್ನೆ ಸಂಖ್ಯೆ:4133ರ ಉತ್ತರದ ಲಗತ್ತು)

ಬೆಳಗಾವಿ ಜಿಲ್ಲೆಯಲ್ಲಿ 1996-97, 1997-98 ಮತ್ತು 1998-99ನೇ ಸಾಲಿನಲ್ಲಿ ಪೂರ್ಣಗೊಂಡಿರುವ ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿಗಳ ವಿವರ.

ವಿಧಾನ ಸಭಾ ಕ್ಷೇತ್ರ	ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ			ಕಿರುನೀರು ಸರಬರಾಜು ಯೋಜನೆ		
	96-97	97-98	98-99	96-97	97-98	98-99
1. ಉಚಗಾಂವ	1	5	3	4	3	3
2. ಬಾಗೇವಾಡಿ	10	4	2	10	8	7
3. ಖಾನಾಪೂರ	2	3	2	10	11	7
4. ಬೈಲಹೊಂಗಲ	10	6	1	6	10	2
5. ಕಿತ್ತೂರು	11	7	3	10	15	15
6. ರಾಮದುರ್ಗ	7	5	6	2	14	5
7. ಪರಸಗಡ	20	6	3	5	6	6
8. ಅಥಣಿ	3	-	-	5	5	-
9. ಕಾಗವಾಡ	-	-	-	1	1	-
10. ಚಿಕ್ಕೋಡಿ	-	2	-	3	5	-
11. ಸದಲಗಾ	-	-	-	1	6	-
12. ನಿಪ್ಪಾಣಿ	2	-	-	2	3	-
13. ಗೋಕಾಕ್	1	1	-	1	-	-
14. ಅರಭಾವಿ	-	-	-	2	3	-

15. ಹುಕ್ಕೇರಿ	1	4	-	9	2	-
16. ಸಂಕೇಶ್ವರ	1	2	-	3	-	-
17. ರಾಯಭಾಗ	2	4	1	7	4	-
ಒಟ್ಟು	71	49	21	81	96	45